ಮಗುವನ್ನು ತಂದುಕೊಡಿ ಎಂದು ಹೇಳುವುದಕ್ಕೆ ನಾನು ಯಾರು. ಅದನ್ನು ಅವರು ಒಪ್ಪುವುದಕ್ಕೆ ಸಾಧ್ಯವೇ? ಅದಲ್ಲ ಪ್ರಶ್ನೆ. ತಾವೇ ಹೇಳಿದಂತೆ ಹುಟ್ಟಿದ್ದು ಗಂಡು ಮಗು, ತೋರಿಸಿದ್ದು ಹೆಣ್ಣುಮಗು, ಸತ್ತ ಹೆಣ್ಣು ಮಗುವನ್ನು ತೋರಿಸಿದ್ದರೆ ನಾನು ವಿರೋಧ ಮಾಡುತ್ತಿರಲಿಲ್ಲ, ತಪ್ಪಾಗಿದೆ ಎಂದು ಹೇಳುತ್ತಿದ್ದೆ. ಅಲ್ಲಿ ಅವರು ಹಾಲು ಕುಡಿಸುವುದಕ್ಕೆ ಕರೆದುಕೊಂಡು ಹೋಗಿದ್ದಾರೆ. ಸ್ವತಃ ನಾನೇ ಹೋಗಿ ನೋಡಿ ಬಂದಿದ್ದೇನೆ. ಯಾವ ತಾಯಿ ಇವತ್ತು ನಮ್ಮ ಸಮಾಜದಲ್ಲಿ ಅದಲುಬದಲು ಆದಂತಹ ಮಗುವನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಅಥವಾ ತನ್ನ ಮಗು ಸತ್ತಿದ್ದರೆ ಒಪ್ಪಿಕೊಳ್ಳುವುದಕ್ಕೆ ಹಿಂದುಮುಂದು ನೋಡುತ್ತಾಳೆ. ಸತ್ತಿದ್ದು ನಿಜವಾದರೆ ಆ ಮಗು ಸತ್ತ ತಕ್ಷಣ ತಿಳಿಸಲಿಲ್ಲ. ಅವಳನ್ನು ಹಾಲು ಕುಡಿಸುವುದಕ್ಕೆ ಕರೆದುಕೊಂಡು ಹೋದದ್ದು ಆಸ್ಪತ್ರೆ ಸಿಬ್ಬಂದಿ, ತೋರಿಸಿದ್ದು ಹೆಣ್ಣುಮಗುವನ್ನು. ಪ್ರತಿಭಟನೆ ಮಾಡಿದಮೇಲೆ ಸಂಬಂಧಪಟ್ಟ ದಾಖಲೆಗಳನ್ನು ಇಟ್ಟುಕೊಂಡ ಮೇಲೆ ಅನಿವಾರ್ಯವಾಗಿ ಇನೊಂದು ಸತ್ತ ಗಂಡುಮಗುವನ್ನು ತೋರಿಸಿರತಕ್ಕದ್ದು ಒಂದು. ಸನ್ಮಾನ್ಯ ಮುಖ್ಯಮಂತ್ರಿಯವರೆ, ಕೇವಲ ಇದೊಂದೇ ಘಟನೆಯಲ್ಲ, ನಾನು ಜವಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಹೇಳುತ್ತಿದ್ದೇನೆ. ನೀವು ಬೇಕಾದರೆ ಯಾರನ್ನಾದರೂ ಕಳುಹಿಸಿ ಎನ್‌ಕ್ವರಿ ಮಾಡಿಸಿ ತಿಳಿದುಕೊಳ್ಳಬಹುದು. ಈ ರೀತಿ ಹತ್ತಾರು ಘಟನೆಗಳು ಆಗಿವೆ. ಅಮಾಯಕ ಹೆಣ್ಣುಮಕ್ಕಳಿಗೆ ಹೆರಿಗೆಯಾದ ನಂತರ ಅವರ ಮಕ್ಕಳನ್ನು ಮಾರುವಂತಹ ವ್ಯವಸ್ಥಿತವಾದಂತಹ ಜಾಲವಿದೆ. ಈಗ ನಾನು ಹೇಳಿದ್ದುದು ತಮಗೆ ಮನದಟ್ಟಾಗಿರಬಹುದು. ಇದೊಂದರ ಬಗ್ಗೆ ಎನ್‌ಕ್ವರಿ ಮಾಡಿ ಎಂದು ಹೇಳುತ್ತಿಲ್ಲ. ಈ ರೀತಿ ಮಕ್ಕಳನ್ನು ಮಾರುತ್ತಿರುವಂಥ ಜಾಲವಿದೆ. ಈ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ. ಅಲ್ಲಿ ಅದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಈ ಸಮಯದಲ್ಲಿ ಇದನ್ನು ಎನ್‌ಕ್ವಯರಿ ಮಾಡಿಸಿ. ಇದನ್ನೂ, ಅದನ್ನೂ ಎರಡನ್ನೂ ಸೇರಿಸಿ ಮಾಡಿ. ದೇವರ ದಯೆಯಿಂದ ಮೂಳೆ ತಜ್ಞರಿಂದ ಪರೀಕ್ಷೆಯಾಗಿ ಅದಲ್ಲ ಅಂದರೆ ನಾನು ಗೊಂದಲ ಮಾಡಬೇಕು ಎಂದು ಹೇಳುವುದಿಲ್ಲ. ಈ ರೀತಿ ಅನೇಕ ಗೊಂದಲದ ವಾತಾವರಣ ಇದ್ದು ಮಕ್ಕಳನ್ನು ಮಾರುವಂಥ ವ್ಯವಸ್ಥಿತವಾದ ಜಾಲ ಇರುವುದರಿಂದ ದಯಮಾಡಿ ಸಿಓಡಿ ಗೆ ವಹಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆಗಳು

1. ಸಿಂಧನೂರು ತಾಲ್ಲೂಕಿನ ಸಹಕಾರಿ ಸಂಘದ ವ್ಯಾಪ್ತಿಗೆ ಸೇರಿದ ಜಿನ್ನಿಂಗ್ ಮತ್ತು ಪ್ರೆಸಿಂಗ್ ಘಟಕವನ್ನು ಗುತ್ತಿಗೆ ನೀಡಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಸಭಾಧ್ಯಕ್ಷರೆ, ಸಿಂಧನೂರು ತಾಲ್ಲೂಕಿನ ಸಹಕಾರಿ ಸಂಘದ ವ್ಯಾಪ್ತಿಯಲ್ಲಿ ಬರುವ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಘಟಕವನ್ನು ಸರ್ಕಾರ ಹಾಕಿದ ನಿಬಂಧನೆಗಳನ್ನು ಉಲ್ಲಂಘಿಸಿ ಗುತ್ತಿಗೆ ನೀಡಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಮಾಡಿರುವ ಬಗ್ಗೆ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : (ಸಹಕಾರ ಸಚಿವರು) ಮಾನ್ಯ ಸಭಾಧ್ಯಕ್ಷರೆ, ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

ಸಿಂಧನೂರು ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘವು ತನ್ನ ಹತ್ತಿ ಅರೆಯುವ (ಜಿನ್ನಿಂಗ್) ಘಟಕವನ್ನು 1974ರಲ್ಲಿ ಸರ್ಕಾರದಿಂದ ಷೇರು ರೂ. 75,000-00 ಹಾಗೂ ಅನುದಾನ ರೂ. 70,000-00 ಒಟ್ಟು ರೂ. 1,45,000-00 ಗಳನ್ನು ಪಡೆದು

ಸ್ಥಾಪಿಸಲಾಗಿದೆ. ಸದರಿ ಘಟಕವು 1986ರ ವರೆಗೆ ಚೆನ್ನಾಗಿ ಕಾರ್ಯ ನಿರ್ವಹಿಸಿ ಅಲ್ಲಿಂದ ಹಣಕಾಸಿನ ತೊಂದರೆಯಿಂದ ಸ್ಥಗಿತಗೊಂಡಿರುತ್ತದೆ. ಅದೇ ರೀತಿ ಸಂಘದ ಅರಳಿ ಮೂಟ್ಚಿ ಕಟ್ಟುವ (ಪ್ರೆಸಿಂಗ್) ಘಟಕವನ್ನು 1977ರಲ್ಲಿ ಎನ್.ಸಿ.ಡಿ.ಸಿ. ಯಿಂದ ಸಾಲ ರೂ. 9,75,000-00 ಹಾಗೂ ಷೇರು ಬಂಡವಾಳ ರೂ. 3,40,000-00 ಒಟ್ಟು ರೂ. 13,15,000-00 ಗಳನ್ನು ಪಡೆದು ಸ್ಥಾಪಿಸಲಾಗಿರುತ್ತದೆ. ಸದರಿ ಘಟಕವು ಸಹ 1986ರ ವರೆಗೆ ಚೆನ್ನಾಗಿ ನಡೆದು ನಂತರ ಹಣಕಾಸಿನ ತೊಂದರೆಯಿಂದ ಸ್ಥಗಿತಗೊಂಡಿರುತ್ತದೆ.

ಸ್ಥಗಿತಗೊಂಡಿರುವ ಸಂಘದ ಘಟಕಗಳನ್ನು ಪ್ರಾರಂಭಿಸಲು ಸುಮಾರು ರೂ. 46 ಲಕ್ಷದಷ್ಟು ಹಣ ಬೇಕಾಗಿದ್ದು, ಅದನ್ನು ಸಂಘವು ಸದ್ಯದ ಪರಿಸ್ಥಿತಿಯಲ್ಲಿ ಭರಿಸಲು ಸಾಮರ್ಥ್ಯವಿಲ್ಲವಾಗಿರುವುದರಿಂದ ಸಂಘದ ಸದರಿ ಘಟಕಗಳನ್ನು ಗುತ್ತಿಗೆ ಆಧಾರದ ಮೇಲೆ ಕೊಡಲು ಅನುಮತಿ ನೀಡುವಂತೆ ವಿನಂತಿಸಿದ್ದರ ಮೇರೆಗೆ ಸಂಘದ ಹತ್ತಿ ಅರೆಯುವ ಘಟಕ ಹಾಗೂ ಪ್ರೆಸ್ಸಿಂಗ್ ಘಟಕವನ್ನು ಗುತ್ತಿಗೆ ಆಧಾರದ ಮೇಲೆ ನೀಡಲು ಸರ್ಕಾರ ಆದೇಶ ಸಂಖ್ಯೆ : ಸಿಎಂಡಬ್ಲ್ಯು 93 ಎಂಸಿಎಸ್ 92, ದಿನಾಂಕ 29-8-92ರಲ್ಲಿ ಹಲವಾರು ಷರತ್ತುಗಳೊಂದಿಗೆ ನೀಡಿರುತ್ತದೆ. ಆದರೆ ಸಂಘವು ಸರ್ಕಾರ ವಿಧಿಸಿದ ಷರತ್ತುಗಳನ್ನು ಪಾಲಿಸದೆ ನಿಯಮ ಬಾಹಿರವಾಗಿ ಎರಡು ಘಟಕಗಳನ್ನು ಇತ್ತೀಚೆಗೆ ಮೆ : ಮಹೇಂದ್ರ ಎಂಟರ್ ಪ್ರೈಸಸ್, ಸಿಂಧನೂರು ಇವರಿಗೆ ವಾರ್ಷಿಕ ಬಾಡಿಗೆ ರೂ.1,52,251.00 ಮೇಲೆ ಗುತ್ತಿಗೆ ನೀಡಿರುವುದಲ್ಲದೆ ಗುತ್ತಿಗೆದಾರರಿಂದ ರಿಪೇರಿ ಸಲುವಾಗಿ ರೂ. 6,86,500.00 ಗಳನ್ನು ಮುಂಗಡವಾಗಿ ಪಡೆದಿದ್ದು ಅದರಲ್ಲಿ ರೂ. 6,57,700.61 ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆ. ಈ ಬಗ್ಗೆ ಇಲಾಖೆಯ ಪೂರ್ವಾನುಮತಿ ಪಡೆದಿರುವುದಿಲ್ಲ ಮತ್ತು ಟೆಂಡರ್ ಕರೆದು ದುರಸ್ತಿ ಕೆಲಸ ವಹಿಸಿಲ್ಲದಿರುವುದು ಕೂಡ ಕಂಡು ಬರುತ್ತದೆ.

ಈ ಸಂಸ್ಥೆಯಲ್ಲಿ ನಿರ್ದಿಷ್ಟವಾಗಿ ನಡೆದಿರತಕ್ಕಂತಹ ಅವ್ಯವಹಾರ ಹಾಗೂ ನಿಯಮ ಬಾಹಿರವಾಗಿ ನಡೆದುಕೊಂಡಿರುವ ಅಧಿಕಾರಿಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಉಪ ನಿಬಂಧಕರು (ವಿಚಾರಣೆ ಮತ್ತು ಪರಿವೀಕ್ಷಣೆ), ಸಹಕಾರ ಸಂಘಗಳ ನಿಬಂಧಕರ ಕಛೇರಿ ಇವರಿಗೆ ವಹಿಸಲಾಗಿದ್ದು ತನಿಖೆ ಪೂರ್ಣಗೊಂಡನಂತರ ತಪ್ಪಿತಸ್ಥರ ಮೇಲೆ ನಿಯಮಾವಳಿ ರೀತ್ಯಾ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸತ್ಯವನ್ನು ಏಕೆ ಬಹಿರಂಗಪಡಿಸುತ್ತಿಲ್ಲ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಅಲ್ಲಿ ದುರ್ವ್ಯವಹಾರ ಆಗಿದೆ ಎನ್ನುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಮತ್ತೊಮ್ಮೆ ನನ್ನ ಕ್ಲಾರಿಫಿಕೇಷನ್‌ಗೆ ಅವರು ಉತ್ತರ ಕೊಡಬೇಕು. ಜಿನ್ನಿಂಗ್ ಪ್ರಸ್ಸಿಂಗ್ ಘಟಕವನ್ನು ಸ್ಥಾಪನೆ ಮಾಡಲು 13 ಲಕ್ಷ ಖರ್ಚು ಮಾಡಲಾಗಿದೆ. ತಮ್ಮ ಸ್ಟೇಟ್‌ಮೆಂಟ್ ಪ್ರಕಾರ ಸ್ಥಗಿತಗೊಂಡಿರುವ ಘಟಕವನ್ನು ಪ್ರಾರಂಭ ಮಾಡಬೇಕಾದರೆ 46 ಲಕ್ಷ ರೂಪಾಯಿ ಬೇಕಾಗುತ್ತದೆಂದು ಹೇಳಿದ್ದೀರಿ. 13 ಲಕ್ಷ ರೂಪಾಯಿ ಘಟಕವನ್ನು ಪ್ರಾರಂಭಿಸಲು 46 ಲಕ್ಷ ರೂಪಾಯಿ ಖರ್ಚು ಮಾಡುವ ಅವಶ್ಯಕತೆ ಇದೆಯೆ? ಅದು ನನಗೆ ಗೊತ್ತಾಗುವುದಿಲ್ಲ. 46 ಲಕ್ಷ ರೂಪಾಯಿ ಫಿಗರ್ಸ್ ತಪ್ಪು ಇದಯೇನೊ ನೋಡಿ 46 ಲಕ್ಷ ರೂಪಾಯಿ ಖರ್ಚು ಮಾಡಬೇಕಾದರೆ it will be a laughing stock ಇದರಲ್ಲಿ Day light robbery ಆಗಿದೆ. ಅಲ್ಲಿ ಏನು ಮಾಡಿದ್ದಾರೆ ಎಂದರೆ ಸರ್ಕಾರ ಜಿನ್ನಿಂಗ್ ಪ್ರೆಸ್ ಯೂನಿಟ್ ಅನ್ನು ಕಾಂಟ್ಯಾಕ್ಟ್ ಬೇಸಿಸ್ ಮೇಲೆ ಕೊಡಬೇಕೆಂದು 22 ಕಂಡೀಶನ್‌ಗಳನ್ನು ಹಾಕಿ ಮಂಜೂರಾತಿ ಕೊಟ್ಟಿದ್ದು ನಿಜ. ಆದರೆ

ಯಾವುದೇ ಕಂಡೀಶನ್ ಕಂಪ್ಯಾಲ್ ಆಗಿಲ್ಲ. ಇವತ್ತು ಏನಾಗಿದೆ ಎಂದರೆ ಇವರು ಮಹೇಶ್ವರಿಯೋ, ಮಹೇಂದ್ರರಿಗೂ ಗುತ್ತಿಗೆ ಆಧಾರದ ಮೇಲೆ ಕೊಟ್ಟಿದ್ದಾರೆ. ರಾಯಚೂರಿನ 'ಸುದ್ದಿಬಿಂಬ' ಎನ್ನುವ ದಿನಪತ್ರಿಕೆಯಲ್ಲಿ 27.12.92ರ ಸಂಚಿಕೆಯಲ್ಲಿ ಎರಡನೇ ಪುಟದಲ್ಲಿ ಅಡ್ವರ್ಟೈಸ್‌ಮೆಂಟ್ ಬಂದಿದೆ. ಅಲ್ಲಿ ಅಂಬಿಕಾದೇವಿ ಜಾತ್ರೆ ಬಗ್ಗೆ ಅಡ್ವರ್ಟೈಸ್‌ಮೆಂಟ್ ಇದೆ. ನಮ್ಮ ಸರ್ಕಾರಕ್ಕೆ ಅದೇ ದಿನಕ್ಕೆ ಮತ್ತೊಂದು ಪ್ರಿಂಟ್ ಮಾಡಿದ್ದಾರೆ. ಅದರಲ್ಲಿ ಎರಡನೇ ಪುಟದಲ್ಲಿ ಈ ಜಾಹೀರಾತು ಇದೆ. ಯಾರಿಗೆ ಗುತ್ತಿಗೆ ಆಧಾರದ ಮೇಲೆ ಕೊಡಬೇಕು ಎಂಬುದರ ಬಗ್ಗೆ ಜಾಹೀರಾತು ಇದೆ. ಅಂದರೆ ಇದನ್ನು ಡೈಲಿ ಸರ್ಕ್ಯುಲೇಶನ್‌ನಲ್ಲಿ ಹಾಕಿಲ್ಲ. ಸರ್ಕಾರಕ್ಕೆ ಕಳಿಸುವ ಒಂದೆರಡು ಪ್ರತಿಗಳಲ್ಲಿ ಅಷ್ಟೇ ಹಾಕಿಸಿದ್ದಾರೆ. ಅಂದರೆ ನಾವು ಕಾಂಟ್ರಾಕ್ಟ್ ಮೇಲೆ ಕೊಡುತ್ತಾ ಇರುವುದು ಯಾರಿಗೂ ಗೊತ್ತಾಗಬಾರದು ಎನ್ನುವ ಉದ್ದೇಶ ಇಟ್ಟುಕೊಂಡು ಈ ಪ್ರಕಾರ ಮಾಡಿದ್ದಾರೆ. ಹಾಗಾಗಿ ತಾವು ಇದರ ಬಗ್ಗೆ ಎನ್‌ಕ್ವರಿ ಮಾಡಬೇಕಾಗುತ್ತದೆ. ಎರಡನೆಯದು, ಟೆಂಡರ್ ಯಾವ ಪ್ರಕಾರ ಮಾಡಿದ್ದಾರೆ ಎಂದರೆ, 27ನೇ ತಾರೀಖು ಪೇಪರ್‌ನಲ್ಲಿ ಪ್ರಿಂಟಾಗಿದೆ. 27ನೇ ತಾರೀಖಿನೊಳಗಾಗಿ ಅವರು ಟೆಂಡರ್ ಹಾಕಬೇಕು. ಟೆಂಡರ್ ಪೇಪರ್ಸ್ ಇಲ್ಲಿ ಇದೆ. ಕೆಲವು ಜನ ಟೆಂಡರ್ ಹಾಕಿದ್ದಾರೆ. ಅವರಲ್ಲಿ ಬಿಜಾಪುರದವರು 26ನೇ ತಾರೀಖಿಗೆ ಟೆಂಡರ್ ಹಾಕಿದ್ದಾರೆ. 27ರಲ್ಲಿ ಪೇಪರ್‌ನಲ್ಲಿ ಬಂದಿದೆ, ಅವರು 26ಕ್ಕೆ ಟೆಂಡರ್ ಹಾಕಿದ್ದಾರೆ. ಇನ್ನೊಂದು ಮುಖ್ಯ ಅಂಶವೆಂದರೆ ಈ ಟೆಂಡರ್‌ಗಳೆಲ್ಲ ಒಂದೇ ಹ್ಯಾಂಡ್‌ರೈಟಿಂಗ್‌ನಲ್ಲಿದೆ. ಒಂದೇ ವ್ಯಕ್ತಿಯ ಹ್ಯಾಂಡ್‌ರೈಟಿಂಗ್ ಇದೆ. ಟೆಂಡರ್ ಡಾಕ್ಯುಮೆಂಟ್ಸ್ ಎಲ್ಲಾ ಫ್ಯಾಬ್ರಿಕೇಟ್ ಮಾಡಿದ್ದಾರೆ. ಡೇಟ್ಸ್ ಫ್ಯಾಬ್ರಿಕೇಟ್ ಮಾಡಿದ್ದಾರೆ. ಆದೇ ಪ್ರಕಾರ ಓವರ್‌ರೈಟಿಂಗ್ ಆಗಿದೆ. ಆದ್ದರಿಂದ ಇಲ್ಲಿ ಅಧಿಕಾರಿಯಿಂದ ತನಿಖೆ ಅಲ್ಲ, ಇದೊಂದು ಫ್ರೌಮಾಫ್ ಕೇಸ್. ಹಾಗಾಗಿ ತಕ್ಷಣ ತಾವು ಅಲ್ಲಿಯ ಸೆಕ್ರೆಟರಿಯವರನ್ನು ಸಸ್ಪೆಂಡ್ ಮಾಡಬೇಕಾಗುತ್ತದೆ. ಆ ಸಂಸ್ಥೆಯನ್ನು ಸೂಪರ್‌ಸೀಡ್ ಮಾಡಬೇಕಾಗುತ್ತದೆ. ಮತ್ತು ಗುತ್ತಿಗೆ ಆಧಾರದಮೇಲೆ ಕೊಡಬೇಕಾದರೆ ಬಹಿರಂಗವಾಗಿ ಡೈಲಿ ಪೇಪರ್‌ನಲ್ಲಿ ಅಡ್ವರ್ಟೈಸ್‌ಮೆಂಟ್ ಮಾಡಿ ಅದನ್ನು ಬೇಕಾದರೆ ಕಾಂಟ್ರಾಕ್ಟ್ ಬೇಸಿಸ್ ಮೇಲೆಕೊಡಿ, ನಮ್ಮ ಅಭ್ಯಂತರ ಇಲ್ಲ. ಸರ್ಕಾರದ ಆದೇಶ ಅದೇ ಪ್ರಕಾರವಾಗಿ ಇದೆ. ರೆಗ್ಯುಲರ್ ಡೈಲಿ ಪೇಪರ್‌ನಲ್ಲಿ ಜಾಹೀರಾತು ಕೊಡಬೇಕು ಎಂದು ಸರ್ಕಾರ ಆದೇಶ ಕೊಟ್ಟಿದೆ. ಆದ್ದರಿಂದ ಇಲ್ಲಿ ಸರ್ಕಾರದ್ದು ತಪ್ಪಾಗಿಲ್ಲ. ಆದರೆ ಸಹಕಾರ ಸಂಘದಲ್ಲಿ ಯಾವ ರೀತಿ ಒಂದು ಫ್ರಾಡ್, ಮಿಪ್ರಾಪ್ಸಿಯೇಶನ್ ನಡೆಯುತ್ತದೆ ಎಂದರೆ, ಇದು ಒಂದು ಉದಾಹರಣೆ. ತಕ್ಷಣ ಅಲ್ಲಿರುವ ಸೆಕ್ರೆಟರಿಯನ್ನು ಸಸ್ಪೆಂಡ್ ಮಾಡಬೇಕಾಗುತ್ತದೆ ಮತ್ತು ಸಂಸ್ಥೆಯನ್ನು ಸೂಪರ್‌ಸೀಡ್ ಮಾಡಬೇಕಾಗುತ್ತದೆ. ಸರ್ಕಾರಕ್ಕೆ ಇವರು ಪ್ರಪೋಸಲ್ ಏನು ಕೊಟ್ಟಿದ್ದಾರೆ, ಅದನ್ನು ಕೊಡುವುದಕ್ಕೆ ಮುಂದೆ ತಾವಾಗಿಯೇ ಕೊಟ್ಟಿದ್ದಾರೆ. ಮಹೇಶ್ವರಿಯೇ ಅಂಡ್ ಮಹೇಂದ್ರನೋ ಅವರ ವಶಕ್ಕೆ ಆ ಯುನಿಟ್‌ನ್ನು ಕೊಟ್ಟಿದ್ದಾರೆ. ಅದನ್ನು ಯಾವ ಪ್ರಕಾರ ಕೊಟ್ಟಿದ್ದಾರೆ, ಯಾರನ್ನು ಕೇಳಿ ಕೊಟ್ಟರು ಎಂಬುದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಪುನಃ ಆ ಸೊಸೈಟಿಯನ್ನು ತಾವು ತೆಗೆದುಕೊಂಡು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ವಿವರವಾದ ಹೆಚ್ಚಿನ ಮಾಹಿತಿಯನ್ನು ಶ್ರೀ ಹಂಪನಗೌಡರು ಮತ್ತು ಶ್ರೀ ಏಕಾಂತಯ್ಯನವರು ಕೊಡುತ್ತಾರೆ.

† ಶ್ರೀ ಎಚ್. ಏಕಾಂತಯ್ಯ : ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಅದೇನೆಂದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು. ಇಲ್ಲಿ ಕೇವಲ ಅಧಿಕಾರಿಗಳು ಮಾತ್ರ ಇದನ್ನು ಮಾಡಿಲ್ಲ. ನಿಮ್ಮ ನಿರ್ದೇಶಕರ ಮಂಡಳಿ [illegible] ಅವರೂ ಸಹ ಇದರಲ್ಲಿ ಶಾಮೀಲಾಗಿದ್ದಾರೆ. ಏಕೆ

ಶಾಮಿಲಾಗಿದ್ದಾರೆ ಎನ್ನುವುದನ್ನು ನಾನು ತಮಗೆ ತೋರಿಸುತ್ತೇನೆ. 27ನೇ ತಾರೀಖು ಭಾನುವಾರ ಮೀಟಿಂಗ್‌ನ್ನು ಕರೆಯುತ್ತಾರೆ. ಭಾನುವಾರ ಇದಕ್ಕೋಸ್ಕರ ಮೀಟಿಂಗ್ ಕರೆದಿರಲಿಲ್ಲ. 26ನೇ ತಾರೀಖು ಒಂದು ಮೀಟಿಂಗ್ ಇತ್ತು ಎಂದು ಹೇಳುತ್ತಾರೆ. 27ನೇ ತಾರೀಖು ಮುಂದುವರಿದ ಮೀಟಿಂಗ್‌ನಲ್ಲಿ ಇದನ್ನು ಇಡುತ್ತಾರೆ. ಮುಂದುವರೆದು ಮೀಟಿಂಗ್‌ನಲ್ಲಿ ಇಡುವುದರ ಜೊತೆಗೆ ಅವರು ಇನ್ನೊಂದು ಹೇಳುತ್ತಾರೆ. ನಮ್ಮ ನಾಯಕರು ಹೇಳಿದಹಾಗೆ ಸುದ್ದಿಬಿಂಬ ಪತ್ರಿಕೆಯನ್ನು ಬನಾವಲ್ ಮಾಡಿಸಿದ್ದಾರೆ. ಈ ಬನಾವಟ್ ಮಾಡಿದ ಅಪರಾಧ ಏನಿದೆ, ಇದು ಕ್ರಿಮಿನಲ್ ಸ್ವರೂಪದ ಅಪರಾಧ. ಆದ್ದರಿಂದ ಸಂಬಂಧಪಟ್ಟ ಪೇಪರ್‌ನವರು ಏನಿದ್ದಾರೆ ಮತ್ತು ನಿಮ್ಮ ಅಧ್ಯಕ್ಷರು ಏನಿದ್ದಾರೆ ಹಾಗೂ ನಿಮ್ಮ ಕಾರ್ಯದರ್ಶಿಯವರು ಏನಿದ್ದಾರೆ, ಇವರೆಲ್ಲರ ಮೇಲೂ ಸಹ ನೀವು ಕ್ರಿಮಿನಲ್ ಆ್ಯಕ್ಷನ್ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಕೇವಲ ಅಧಿಕಾರಿಗಳ ಮೇಲೆ, ಯಾರು ತಪ್ಪು ಮಾಡಿದ್ದಾರೆ ವಿಚಾರಣೆ ಮಾಡುತ್ತೇವೆ ಎಂದು ನಿಮ್ಮ ಇಲಾಖೆಯು ನಿರ್ದೇಶನ ಮಾಡಿದರೆ, ಇದರಲ್ಲಿ ನ್ಯಾಯ ಸಿಕ್ಕುವುದಕ್ಕೆ ಸಾಧ್ಯವಿಲ್ಲ. ಅದಕ್ಕಿಂತ ಹೆಚ್ಚಾಗಿ, ಪ್ರೆಸ್ಸಿಂಗ್ ಮತ್ತು ಜಿನ್ನಿಂಗ್ ಯೂನಿಟ್ ಬೆಲೆ ಏನಿದೆ, ಅವತ್ತು 8 ಲಕ್ಷ ರೂಪಾಯಿ ಇರಲಿಲ್ಲ. ಇವತ್ತು ರಿಪೇರಿಗೆ 5 ಲಕ್ಷ ಚಿಲ್ಲರೆ ಖರ್ಚು ಮಾಡಿದ್ದಾರೆ. ಈ 5 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಖರ್ಚು ಮಾಡದೆ ಅವರು ಖರ್ಚು ಮಾಡಿದ್ದೇನೆಂದು ತೋರಿಸಿದ್ದಾರೆ. ಇದರ ಬಗ್ಗೆ ತಾವು ವಿಚಾರಣೆ ಮಾಡಬೇಕು. ಸಂಬಂಧಪಟ್ಟ ಆಡಳಿತ ಮಂಡಳಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಿಂತ ಹೆಚ್ಚಾಗಿ, ನೀವು ಮ್ಯಾನೇಜರನ್ನು ಸಸ್ಪೆಂಡ್ ಮಾಡಿದ್ದೇವೆಂದು ಹೇಳಬಹುದು ಅಥವಾ ಇನ್ನು ಏನಾದರೂ ಹೇಬಹುದು. ಟೆಂಡರ್ ನೋಟಿಫಿಕೇಷನ್ ತೆಗೆದುಕೊಂಡಿದ್ದಾರೆ, ಪ್ರತಿಯೊಂದನ್ನೂ ಸಹ ಅವರು ಬೆನಾವಟ್ ಮಾಡಿದ್ದಾರೆ. 27ನೇ ತಾರೀಖು ತೆಗೆದುಕೊಂಡಿದ್ದಾರೆ, 26ನೇ ತಾರೀಖು ರಸೀತಿ ಹಾಕಿದ ಮೇಲೆ, 27ನೇ ತಾರೀಖು ಟೆಂಡರ್ ತೆಗೆದುಕೊಂಡಿದ್ದೇವೆಂದು ಹೇಳುವುದಕ್ಕೆ ಬರುವುದಿಲ್ಲ ಎಂಬ ಕಾರಣದಿಂದ ಅವತು ಭಾನುವಾರ ಆಗಿದ್ದರಿಂದ, ಪ್ರತಿಯೊಂದು ಟೆಂಡರ್ ಫಾರಂನಲ್ಲೂ ಅಧ್ಯಕ್ಷರು ಅಥವ ಸಂಬಂಧಪಟ್ಟ ಅಧಿಕಾರಿಗಳು ತಿದ್ದಿದ್ದಾರೆ. ತಾವು ತೆಗೆದು ನೋಡಿ ಫೋಟೋಸ್ಟ್ಯಾಟ್ ಕಾಪಿ ಸಹ ನಮ್ಮಲ್ಲಿದೆ ಪ್ರತಿಯೊಂದು ಟೆಂಡರ್ ಫಾರಂ ಸಹ ಸಹ ತಿದ್ದಿದ್ದಾರೆ. ಈ ರೀತಿ ಏನು ಫೋರ್ಜಿಂಗ್ ಡಾಕ್ಯುಮೆಂಟ್ಸ್ ಇದೆ, ಅಥವಾ ಡಾಕ್ಯುಮೆಂಟ್ಸ್ ಸೃಷ್ಟಿ ಮಾಡಿದ್ದಾರೆ, ಇವು ಕ್ರಿಮಿನಲ್ ಸ್ವರೂಪದ ಅಪರಾಧಗಳಾಗಿವೆ. ಆದ್ದರಿಂದ, ಸಂಬಂಧಪಟ್ಟ ಆಡಳಿತ ಮಂಡಳಿಯ ಮೇಲೆ ಮುಖ್ಯವಾಗಿ ನಿಮ್ಮ ಅಧ್ಯಕ್ಷರ ಮೇಲೆ, ಕಾರ್ಯದರ್ಶಿಯವರ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕು. ತಾವು ಒಂದು ಮಾತನ್ನು ಒಪ್ಪಿದ್ದೀರಿ. ನಮ್ಮ ಅನುಮತಿ ಇಲ್ಲದೇ ಅವರು ರಿಪೇರಿ ಮಾಡಿದ್ದಾರೆಂದು ಹೇಳಿದ್ದೀರಿ. ಅವರು ಎಷ್ಟು ತೆಗೆದುಕೊಂಡಿರುವುದು, ಎಂದರೆ, 6 ಲಕ್ಷದ 85 ಸಾವಿರ ರೂಪಾಯಿಗಳನ್ನು ಮುಂಗಡವಾಗಿ ತೆಗೆದುಕೊಂಡಿದ್ದಾರೆ. ಈ 6 ಲಕ್ಷದ 85 ಸಾವಿರ ರೂಪಾಯಿಗಳನ್ನು ಮುಂಗಡವಾಗಿ ತೆಗೆದುಕೊಂಡು, ವರ್ಷ ಒಂದಕ್ಕೆ 1 ಲಕ್ಷದ 51 ಸಾವಿರ ರೂಪಾಯಿಗಳ ಬಾಡಿಗೆ ಮೇಲೆ 3 ವರ್ಷ ಕೊಟ್ಟಿದ್ದಾರೆ. ಅಂದರೆ, ನಾಲ್ಕುವರೆ ಲಕ್ಷ ರೂಪಾಯಿಗಳು ಅವರಿಗೆ ಬರುತ್ತದೆ. ಈ ನಾಲ್ಕುವರೆ ಲಕ್ಷ ಬರುವುದಕ್ಕೆ ಮುಂಚೆ ಸುಮಾರು 6 ಲಕ್ಷದ 85 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ರಿಪೇರಿ ಹೆಸರಿನಲ್ಲಿ ತಿಂದು ಹಾಕಿದ್ದಾರೆ ಎಂದು ಹೇಳುವುದಕ್ಕೆ ಸಾಕಾದಷ್ಟು ಪುರಾವೆಗಳಿವೆ. ಅವರು ಈ ರೀತಿ ಏನು ಕ್ರಿಮಿನಲ್ ಅಪರಾಧ ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮನ್ನು ಒತ್ತಾಯ ಮಾಡುತ್ತೇನೆ. ನೀವು ಕೇವಲ ಸೂಪರ್‌ಸೀಟ್ ಮಾಡುವುದರಿಂದ ಅಥವಾ ಸಂಬಂಧಪಟ್ಟ ಮ್ಯಾನೇಜರ್‌ರವರನ್ನು ಸಸ್ಪೆಂಡ್ ಮಾಡುವುದರಿಂದ ಆಗುವುದಿಲ್ಲ. ಯಾರು ಈ ಅಪರಾಧಕ್ಕೆ ಕಾರಣಕರ್ತರಾಗಿದ್ದಾರೆ, ಅವರು ಯಾರೇ ಆಗಿರಲಿ, ಆ

ನಿರ್ದೇಶಕರ ಮಂಡಳಿ ಮೇಲೆ ಮತ್ತು ಅಧ್ಯಕ್ಷರ ಮೇಲೆ ತಾವು ಕ್ರಮ ಕೈಗೊಳ್ಳಬೇಕೆಂದು ಒತ್ತಾಯದಿಂದ ಹೇಳುತ್ತೇನೆ.

ಶ್ರೀ ಬಿ. ಹಂಪನಗೌಡ : ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರದಲ್ಲಿ ಒಪ್ಪಿಕೊಂಡಿದೆ. ಎಂಟರ್‌ಪ್ರೈಸಸ್, ಸಿಂಧನೂರು ಇವರಿಗೆ ವಾರ್ಷಿಕ ಬಾಡಿಗೆ 1,82,251 ರೂಪಾಯಿಗಳ ಮೇಲೆ ಗುತ್ತಿಗೆ ನೀಡಿರುವುದಲ್ಲದೆ, ಗುತ್ತಗೆದಾರರಿಂದ ರಿಪೇರಿ ಸಲುವಾಗಿ, 6 ಲಕ್ಷದ 86 ಸಾವಿರ ರೂಪಾಯಿಗಳನ್ನು ಮುಂಗಡವಾಗಿ ಪಡೆದಿದ್ದು, ಅದರಲ್ಲಿ 6,57,700 ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆ ಎಂದು ಹೇಳಿದ್ದಾರೆ ಮತ್ತು ಇನ್ನೊಂದು ಕಡೆ ಹೇಳುತ್ತಾರೆ. ಈ ಸಂಸ್ಥೆಯಲ್ಲಿ ನಿರ್ದಿಷ್ಟವಾಗಿ ನಡೆದಿರತಕ್ಕ ಅವ್ಯವಹಾರ ಹಾಗೂ ನಿಯಮಬಾಹಿರವಾಗಿ ನಡೆದುಕೊಂಡಿರುವ ಅಧಿಕಾರಿಗಳಿಗೆ ಸಂಬಂಧಿಸಿದ್ದಂತೆ ವಿಚಾರಣೆ ನಡೆಸಲು, ಉಪ ನಿಬಂಧಕರು, ಸಹಕಾರ ಸಂಘಗಳ ನಿಬಂಧಕರ ಕಚೇರಿ ಇವರಿಗೆ ವಹಿಸಲಾಗಿದೆ. ತನಿಖೆ ಪೂರ್ಣಗೊಂಡ ನಂತರ ಎಂದು ಹೇಳುತ್ತೀರಿ. ತನಿಖೆ ಪೂರ್ಣಗೊಂಡು ಇದರಲ್ಲಿ ಇಷ್ಟು ಅವ್ಯವಹಾರ ಆಗಿದೆ ಎಂದು ಹೇಳಿದ ಮೇಲೂ ಮತ್ತೆ ವಿಚಾರಣೆ ಎಂದು ಹೇಳುವುದರಲ್ಲಿ ಅರ್ಥ ಏನಿದೆ? ಅವರ ಉತ್ತರದಲ್ಲಿ 6 ಲಕ್ಷದ 86 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ನಿಯಮ ಉಲ್ಲಂಘನೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಇವೆಲ್ಲಾ ಆದ ಮೇಲೂ ವಿಚಾರಣೆ ನಡೆಸುತ್ತೇವೆಂದು ಹೇಳಿದರೆ, ವರ್ಷಾನುಗಟ್ಟಲೆ ವಿಚಾರಣೆ ನಡೆಯುತ್ತಲೇ ಇರುತ್ತದೆಯೇ ಅಥವ ಅವರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆಯೇ? ದಯಮಾಡಿ ಮಾನ್ಯ ಮಂತ್ರಿಗಳು ಈ ಸದನದಲ್ಲಿ ಸ್ಪಷ್ಟವಾಗಿ, ಹೇಳಬೇಕು, ಆಡಳಿತ ಮಂಡಳಿಯನ್ನು ರದ್ದು ಮಾಡಬೇಕು ಮತ್ತು ಸಂಬಂಧಪಟ್ಟ ಅಧಿಕಾರಿ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಓಪನಿಂಗ್ ಸೆರಮನಿ ಡಿಸೆಂಬರ್ 2 ರಂದು ಮಾಡಿದ್ದಾರೆ. ಆಧರೆ, ಗುತ್ತಿಗೆ ತೆಗದುಕೊಂಡಿರುವುದು, ಪೇಪರಿನಲ್ಲಿ ಬಂದಿರುವುದು ಡಿಸೆಂಬರ್ 27ನೇ ತಾರೀಖು ಎಂದು. ಇದಕ್ಕೆ ಪೂರ್ವಭಾವಿಯಾಗಿ ಎಲ್ಲರೂ ಶಾಮಿಲಾಗಿದ್ದಾರೆ ಎಂದು ಹೇಳುವುದಕ್ಕೆ ಹೇಳುತ್ತೇನೆ. 2-12-92ರಂದು ಓಪನಿಂಗ್ ಸೆರಮನಿ ಮಾಡುತ್ತಾರೆ. ಗುತ್ತಿಗೆ ಕೊಡುವುದು ಟೆಂಡರ್ ಕರೆಯುವುದು ಯಾವಾಗ ಎಂದರೆ 27ನೇ ತಾರೀಖು. ಅಂದರೆ, ಹೇಗೆ ವ್ಯವಹಾರ ನಡೆದಿದೆ ಎಂಬುದನ್ನು ತಾವೇ ನೋಡಬೇಕು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾವು ಇಷ್ಟಾದರೂ ಕ್ರಮ ತೆಗೆದುಕೊಂಡಿದ್ದೇವೆ. ಇದು 1986ರಿಂದ ಹಾಗೆಯೇ ಇತ್ತು, ಇದನ್ನು ಯಾರೂ ನೋಡಿರಲಿಲ್ಲ. ಈ ವಿಚಾರವನ್ನು ಗಮನ ಸೆಳೆಯುವ ಸೂಚನೆ ಮೂಲಕ, ನನ್ನ ಗಮನ ಸೆಳೆದಿದ್ದಾರೆ. ಮತ್ತು ಮಾನ್ಯ ಸದಸ್ಯರಾದ ಹಂಪನಗೌಡರು ಸಂಬಂಧಪಟ್ಟ ಮಾಹಿತಿಯನ್ನು ನನಗೆ ಕೊಟ್ಟಮೇಲೆ ತಕ್ಷಣ ನಾನು ವಿಚಾರಣೆಗೆ ಕಳುಹಿಸಿದ್ದೆ. ಆದರೆ, ದುರ್ದೈವ, ಡೆಪ್ಯೂಟಿ ರಿಜಿಸ್ಟ್ರಾರ್ ಯಾರು ಇಲ್ಲಿಂದ, ಅಂದರೆ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟ್‌ನಿಂದ, ರಿಜಿಸ್ಟ್ರಾರ್ ಆಫ್ ಸೊಸೈಟಿಯಿಂದ ಹೋಗಿದ್ದಾರೆ, ಅವರು ತಕ್ಷಣ ವರದಿ ತಂದು ನನಗೆ ಕೊಡಲಿಲ್ಲ. ಬಹುಶಃ ಆ ವರದಿ ತಂದಿದ್ದರೆ, ನಾನು ಸಂಬಂಧಪಟ್ಟ ಸೆಕ್ರಟರಿಯವರ ಮೇಲೆ, ಮ್ಯಾನೇಜರ್‌ರವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾ ಇದ್ದೆ. ಈಗ ನಮ್ಮ ಗಮನಕ್ಕೆ ಬಂದಿದೆ, ಈಗತಾನೆ ಎಲ್ಲವೂ ನನಗೆ ಗೊತ್ತಾಗಿದೆ. 6 ಲಕ್ಷ ರೂಪಾಯಿಗಳನ್ನು ಬರೀ ರಿಪೇರಿಗಾಗಿ ಖರ್ಚು ಮಾಡಿದ್ದಾರೆ. ಇದನ್ನೂ ಕೂಡ ಯಾವ ಯಾವ

ತಾರೀಖಿನಲ್ಲಿ ಹಣ ತೆಗೆದುಕೊಂಡಿದ್ದಾರೆ, ಯಾರು ಅಡ್ವಾನ್ಸ್ ಮಾಡಿದ್ದಾರೆ ಎನ್ನುವ ಮಾಹಿತಿಯೂ ನನ್ನ ಹತ್ತಿರ ಇದೆ. ಮತ್ತು ಅದರ ಅಧ್ಯಕ್ಷರು ಇರಬಹುದು, ಸೆಕ್ರೆಟರಿಗಳು ಇರಬಹುದು, ಮ್ಯಾನೇಜರ್ ಇರಬಹುದು, ಡೈರಕ್ಟರು ಇರಬಹುದು ಮತ್ತು ಮೆ. ಮಹೇಂದ್ರ ಎಂಟರ್‌ಪೈನರ್ಸ್ ಇವರೆಲ್ಲಾ ಕೂಡಿ ಮಾಡಿದಂತಹ ಕೆಲಸ ಆಗಿದೆ ಎನ್ನತಕ್ಕಂಥಾದ್ದು ಮೇಲ್ನೊಟಕ್ಕೆ ನಮಗೆ ಕಾಣುತ್ತದೆ. ಮತ್ತು ರೆಕಾರ್ಡ್ ಪ್ರಕಾರವೂ ಕೂಡ ನಮಗೆ ಗೊತ್ತಾಗಿದೆ. ಆದ್ದರಿಂದ ಸಂಪೂರ್ಣವಾಗಿ ತನಿಖೆ ನಡೆಸಿ ಮ್ಯಾನೇಜರ್ ಅಥವಾ ಸೆಕ್ರೆಟರಿ ಟಿ.ಎ.ಪಿ.ಎಂ.ಸಿ. ಇದ್ದಾರೆ. ಅವರ ಮೇಲೂ ಕ್ರಮ ತೆಗೆದುಕೊಳ್ಳುತ್ತೇನೆ. ಒಂದು ವೇಳೆ ಇದರಲ್ಲಿ ಅಧ್ಯಕ್ಷರು ಇನ್‌ವಾಲ್ವ್ ಆಗಿದ್ದರೆ, ಡೈರೆಕ್ಟರ್ಸ್ ಇನ್‌ವಾಲ್ವ್ ಆಗಿದ್ದರೆ ಅವರ ಮೇಲೂ ಕೂಡ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ಹಿಂದೆ ಮುಂದೆ ನೋಡುವ ಹಾಗೆ ಇಲ್ಲ. ಇದರಲ್ಲಿ ಯಾರಿಗೂ ಪ್ರೊಟೆಕ್ಷನ್ ಕೊಡತಕ್ಕಂಥ ಪ್ರಶ್ನೆಯೂ ಬರುವುದಿಲ್ಲ. ಈ ರೀತಿಯಿಂದ ನಾವು ಸಂಸ್ಥೆಗಳನ್ನು ನಡೆಸಿಕೊಂಡು ಹೋದರೆ ಯಾವ ಸಂಸ್ಥೆಗಳೂ ಉದ್ಧಾರವಾಗುವುದಿಲ್ಲ. ಇದು 1986ರಲ್ಲಿ ಕ್ಲೋಸ್ ಆಗಿತ್ತು. ಕ್ಲೋಸ್ ಆಗಿದ್ದನ್ನು ನಾವು ಪುನರ್‌ಜೀವ ತುಂಬಿ ಸ್ವಲ್ಪ ಹಣ ಸಂಗ್ರಹ ಮಾಡಿ ರಿಪೇರಿ ಮಾಡಿ ನಡೆಸತಕ್ಕಂಥ ವ್ಯವಸ್ಥೆ ಮಾಡಿದ್ದೇವೆ ಎನ್ನತಕ್ಕಂಥಾ ವಾದ ಒಂದು ಕಡೆ ಇದ್ದರೆ ಯಾವ ರೀತಿಯಾಗಿ ಅವರು ಕ್ರಮಬದ್ಧವಾಗಿ ಮಾಡಬೇಕಾಗಿತ್ತೋ ಕಾನೂನು ರೀತಿಯಾಗಿ ಮಾಡಬೇಕಾಗಿತ್ತೋ ಆ ರೀತಿಯಾಗಿ ಮಾಡಿಲ್ಲ ಎನ್ನತಕ್ಕಂಥಾದ್ದು ಇನ್ನೊಂದು ಕಡೆ ಕಂಡು ಬಂದಿದೆ. ಅದಕ್ಕಾಗಿ ಇದರ ಬಗ್ಗೆ ಎನ್‌ಕ್ವರಿ ಮಾಡಿಸಿ ಸಂಬಂಧಪಟ್ಟವರಿಗೆ ಶಿಕ್ಷೆ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇನೆ.

2. 1992ರ ಡಿಸೆಂಬರ್‌ನಲ್ಲಿ ಆಂಧ್ರಪ್ರದೇಶದ ವಿಜಯವಾಡದಲ್ಲಿ ನಡೆದ ಅಖಿಲ ಭಾರತ ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗೆ ಕರ್ನಾಟಕದಿಂದ ಆಯ್ಕೆಯಾಗಿದ್ದ ಶ್ರೀ ಕಿಶೋರ್ ಎಂಬುವವರಿಗೆ ಅವಕಾಶ ನಿರಾಕರಿಸಿರುವುದು.

ಶ್ರೀ ಪಿ. ಬಸವರಾಜು (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, 1992ರ ಡಿಸೆಂಬರ್‌ನಲ್ಲಿ ಆಂಧ್ರಪ್ರದೇಶದ ವಿಜಯವಾಡದಲ್ಲಿ ನಡೆದ ಅಖಿಲ ಭಾರತ ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗೆ ಕರ್ನಾಟಕದಿಂದ ಆಯ್ಕೆಯಾಗಿದ್ದ ಶ್ರೀ ಕಿಶೋರ್ ಎಂಬುವವರಿಗೆ ಅವಕಾಶ ನಿರಾಕರಿಸಿದ ಬಗ್ಗೆ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಮಂತ್ರಿಗಳು ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆ ಮಾಡುತ್ತೇನೆ.

ಅಖಿಲ ಭಾರತ ಗ್ರಾಮೀಣ ಕ್ರೀಡಾಕೂಟವನ್ನು ಭಾರತ ಕ್ರೀಡಾ ಪ್ರಾಧಿಕಾರವು ರಾಜ್ಯ ಕ್ರೀಡಾ ಪರಿಷತ್ತುಗಳ ಸಹಕಾರ/ಸಹಭಾಗಿತ್ವದಲ್ಲಿ ಪ್ರತಿ ವರ್ಷವೂ ನಡೆಸಿಕೊಂಡು ಬರುತ್ತಿದೆ. ಈ ಕ್ರೀಡಾಕೂಟದ ಒಂದನೇ ಗುಂಪಿನಲ್ಲಿ ಫುಟ್‌ಬಾಲ್, ಖೋ ಖೋ ಮತ್ತು ಈಜು ಸ್ಪರ್ಧೆಗಳು ಬರುತ್ತವೆ. ಫುಟ್‌ಬಾಲ್ ಮತ್ತು ಖೋ ಖೋ ಕ್ರೀಡೆಗಳಲ್ಲಿ ರಾಜ್ಯ ಮಟ್ಟದ ಪಂದ್ಯಾವಳಿಯನ್ನು ಗುಲ್ಬರ್ಗಾದಲ್ಲಿ ಮತ್ತು ಈಜು ಸ್ಪರ್ಧೆಗಳಲ್ಲಿ ರಾಜ್ಯ ಮಟ್ಟದ ಪಂದ್ಯಾವಳಿಯನ್ನು ಬೆಂಗಳೂರಿನಲ್ಲಿ ನಡೆಸಿ ರಾಷ್ಟ್ರೀಯ ಕ್ರೀಡಕೂಟದಲ್ಲಿ ಭಾಗವಹಿಸಲು ಕ್ರೀಡಾಪಟುಗಳನ್ನು ಆಯ್ಕೆ ಮಾಡಲಾಯಿತು. ಹೀಗೆ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಆಯ್ಕೆಯಾದ ಬಾಲಕ ಬಾಲಕಿಯರಿಗೆ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ದಿನಾಂಕ 8-12-1992 ರಿಂದ 17-12-1992 ರವರೆಗೆ ತರಬೇತಿ ಶಿಬಿರವನ್ನು